# ತತ್ತ್ವಪರಿಭಾಷೆಯ ಕಥೆಗಳು

**ಡಾ. ಸರಸ್ವತಿ ವಿಜಯಕುಮಾರ್**

ಕಥೆ, ಪ್ರಸಂಗಗಳ ಮೂಲಕ ತಿಳಿಸಲ್ಪಡುವ ವಿಚಾರಗಳು ಬಹಳ ಕಾಲ ಮನಸ್ಸಿನಲ್ಲಿ ಉಳಿಯುತ್ತವೆ. ಯಕ್ಷಗಾನ, ನಾಟಕ, ಹರಿಕಥೆಗಳ ಮೂಲಕ ಉತ್ತಮ ವಿಚಾರಗಳು ಜನಸಾಮಾನ್ಯರಿಗೆ ತಲಪುತ್ತವೆ. ಜೈನರ ಕೆಲವು ಕಥೆಗಳಿಗೂ ಶ್ರೀರಾಮಕೃಷ್ಣರ ದೃಷ್ಟಾಂತಗಳಿಗೂ ಇರುವ ಸಾಮ್ಯವನ್ನು ತಿಳಿಸಿರುವ ಲೇಖಿಕಿ ಮೈಸೂರಿನ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್‌ನಲ್ಲಿ ಕನ್ನಡ ಉಪನ್ಯಾಸಕಿ.

ಕಥೆಗಳಿಗೂ ತತ್ತ್ವಪ್ರತಿಪಾದನೆಗೂ ಬಹಳ ಹಿಂದಿನಿಂದಲೂ ವಿಶೇಷ ಸಂಬಂಧ ಬೆಳೆದುಬಂದಿದೆ. ಯಾವುದೇ ಮತ ಧರ್ಮಗಳ ಪ್ರತಿಪಾದನೆಗೆ ಕತೆಗಳು ಜೀವಸಂಜೀವಿನಿಗಳಾಗಿ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ. ಅವುಗಳಲ್ಲಿ ದೃಷ್ಟಾಂತ, ರೂಪಕ, ಪ್ರತಿಮಾ ರೂಪದ ಕಥೆಗಳು ಎಂದು ಮೂರು ವಿಧ.

ದೃಷ್ಟಾಂತ, ರೂಪಕಗಳು ತಾತ್ತ್ವಿಕಾಂಶಗಳನ್ನು ತಮ್ಮೊಳಗೆ ಸಮೀಕರಿಸಿಕೊಂಡು ಒಂದು ಸಂಗತಿಯನ್ನು ಅಥವಾ ಕಥಾಂಶವನ್ನು ನಿರೂಪಿಸುತ್ತವೆ. ಅಲ್ಲಿ ತತ್ತ್ವ ವ್ಯಂಜಕವಾಗುತ್ತದೆ. ಪ್ರತಿಮಾರೂಪದ ಕಥೆಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೃಶ್ಯವನ್ನು ಕಟ್ಟುವ ಅಥವಾ ಚಿತ್ರವನ್ನು ಬಿಡಿಸುವ ಕೆಲಸವನ್ನು ಮಾಡುತ್ತವೆ. ಓದುಗರ, ಕೇಳುಗರ ಮನಸ್ಸಿನಲ್ಲಿ ದೃಶ್ಯವೊಂದನ್ನು ಕಾಣಿಸಿ ಅಲ್ಲಿಂದಾಚೆಗೂ ಅವು ಧ್ವನಿಪೂರ್ಣವಾಗುತ್ತವೆ. ಸಾಮಾನ್ಯವಾಗಿ ಈ ಮಾದರಿಯ ಕಥೆಗಳು ಸಂಕ್ಷಿಪ್ತ ರೂಪದವು. ಅವು ತೀವ್ರ ಹಾಗೂ ತೀಕ್ಷ್ಣಗತಿಯಲ್ಲಿ ತತ್ತ್ವ ಸಂದೇಶವನ್ನು ಮೂಡಿಸುತ್ತವೆ.

## ಮನಸ್ಸಿನ ವಿವಿಧ ಪರಿಣಾಮಗಳನ್ನು ಚಿತ್ರಿಸುವ ಕಥೆಗಳು

ಮನಸ್ಸಿನ ವಿವಿಧ ಭಾವಪರಿಣಾಮಗಳು ವ್ಯಕ್ತಿಯ ವ್ಯಕ್ತಿತ್ವವನ್ನು ತಿಳಿಸುವಂತಹವು. ಮಾನಸಿಕ ಪರಿಣಾಮಗಳ ವಿವಿಧ ಹಂತಗಳನ್ನು ಜೈನ ದರ್ಶನವು 'ಲೇಶ್ಯೆ' ಎಂಬ ಪರಿಭಾಷೆಯಲ್ಲಿ ನಿರೂಪಿಸುತ್ತದೆ. ಲೇಶ್ಯೆಯೆಂದರೆ ಮನಸ್ಸಿನಲ್ಲಿ ಅನುರಂಜಿತವಾಗುವ ಭಾವಪರಿಣಾಮಗಳು. ಅವು ಒಟ್ಟು ಆರು. ಅವುಗಳನ್ನು ಷಡ್ಲೇಶ್ಯೆಗಳೆಂದೇ ಕರೆಯಲಾಗಿದೆ. ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ ಮತ್ತು ಶುಕ್ಲ ಲೇಶ್ಯೆಗಳೆಂದು ಅವುಗಳನ್ನು ಹೆಸರಿಸಲಾಗಿದೆ.

ಜೈನೇತರರಲ್ಲಿ ಮಾನಸಿಕ ಪರಿಣಾಮಗಳನ್ನು ಸಾಮಾನ್ಯವಾಗಿ ಸತ್ವ, ರಜಸ್ಸು ಮತ್ತು ತಮಸ್ಸು ಎಂಬ ಪರಿಭಾಷೆಯಲ್ಲಿ ವಿಂಗಡಿಸಿರುವುದುಂಟು. ಜೈನರು ಹೇಳಿರುವ ಆರು ಲೇಶ್ಯೆಗಳಲ್ಲಿ ಕೃಷ್ಣ ಮತ್ತು ನೀಲ ಲೇಶ್ಯೆಗಳು ತಮೋಗುಣಕ್ಕೂ, ಕಾಪೋತ ಮತ್ತು ಪೀತ ಲೇಶ್ಯೆಗಳು ರಜೋಗುಣಕ್ಕೂ, ಪದ್ಮ ಮತ್ತು ಶುಕ್ಲ ಲೇಶ್ಯೆಗಳು ಸಾತ್ವಿಕ ಗುಣಕ್ಕೂ ಹತ್ತಿರವಾದವು. ಅವು ಕ್ರಮವಾಗಿ ನಿಕೃಷ್ಟ, ಮಧ್ಯಮ ಮತ್ತು ಉತ್ಕೃಷ್ಟ ಭಾವಗಳನ್ನು ಸೂಚಿಸುತ್ತವೆ. ಅಲ್ಲದೆ ಲೇಶ್ಯೆಗಳ ನಿರೂಪಣೆಯಲ್ಲಿ ಭಾವ ಮತ್ತು ಬಣ್ಣಗಳ ಸಮೀಕರಣವಿರುವುದನ್ನೂ ಕಾಣಬಹುದು. ಅವು ಕ್ರಮವಾಗಿ ಕಪ್ಪು, ನೀಲಿ, ಬೂದು, ಹಳದಿ, ತಾವರೆಗೆಂಪು ಮತ್ತು ಬಿಳಿ ಬಣ್ಣಗಳನ್ನು ಪ್ರತಿನಿಧಿಸುತ್ತವೆ. ಅದರಂತೆ ತಾಮಸ ಗುಣವನ್ನು ಕಪ್ಪು ಬಣ್ಣದಲ್ಲಿಯೂ, ರಜೋಗುಣವನ್ನು ಕೆಂಪು ಬಣ್ಣದಲ್ಲಿಯೂ, ಸಾತ್ವಿಕ ಗುಣವನ್ನು ಬಿಳಿಯ ಬಣ್ಣದಲ್ಲಿಯೂ ಗುರುತಿಸುವುದುಂಟು.

ಜೈನಾಗಮ ಗ್ರಂಥಗಳಾದ ಷಟ್ಖಂಡಾಗಮ (ಪ್ರಾಕೃತ—ಕ್ರಿ.ಶ. ೧ನೇ ಶ.), ಗೊಮ್ಮಟಸಾರ (ಪ್ರಾಕೃತ—ಕ್ರಿ.ಶ. ೧೨ನೇ ಶ.), ಪದಾರ್ಥಸಾರ (ಕನ್ನಡ—ಕ್ರಿ.ಶ. ೧೨ನೇ ಶ.) ಮೊದಲಾದ ಗ್ರಂಥಗಳಲ್ಲಿ ಷಡ್ಲೇಶ್ಯೆಗಳ ನಿರೂಪಣೆಯ ಸಂದರ್ಭದಲ್ಲಿ ಸಸ್ಯ ಪರಿಸರದ ಒಂದು ಅಪೂರ್ವ ಪ್ರತಿಮೆಯು ದೊರೆಯುತ್ತದೆ. ಅಲ್ಲಿ ಕಂಡುಬರುವ ವಿವರ ಹೀಗಿದೆ:

ಒಂದು ಮಾವಿನ ಮರ. ಅದರ ತುಂಬ ಹಣ್ಣುಕಾಯಿಗಳು ತೊನೆದಾಡುತ್ತಿವೆ. ಆ ಹಣ್ಣುಗಳನ್ನು ಪಡೆಯಲು ಆರು ಮಂದಿ ವಿವಿಧ ರೀತಿಗಳಲ್ಲಿ ಸನ್ನದ್ಧರಾಗಿದ್ದಾರೆ. ಮೊದಲನೆಯವನು ಹಣ್ಣುಗಳನ್ನು ಪಡೆಯಲು ಕೊಡಲಿ ಹಿಡಿದು ಆ ಮರವನ್ನೇ ಬುಡಸಮೇತ ಕಡಿಯುವ ಭಾವವನ್ನು ತಳೆದು ಅದಕ್ಕಾಗಿ ಸನ್ನದ್ಧನಾಗಿದ್ದಾನೆ; ಅವನ ಬಣ್ಣ ಕಪ್ಪು. ಎರಡನೆಯವನು ಹಣ್ಣುಗಳಿಗಾಗಿ ಕಾಂಡವನ್ನು ಕಡಿಯಲು ಹೊರಟಿದ್ದಾನೆ; ಅವನ ಬಣ್ಣ ನೀಲಿ. ಶಾಖೆಯನ್ನು ಮಾತ್ರ ಕತ್ತರಿಸಿ ಹಣ್ಣುಗಳನ್ನು ಪಡೆಯಲು ಹೊರಟಿರುವ ಮೂರನೆಯವನ ಬಣ್ಣ ಕಾಪೋತ (ಪಾರಿವಾಳದ ಬಣ್ಣ), ಅಂದರೆ ಬೂದು ಬಣ್ಣ. ನಾಲ್ಕನೆಯವನು ಒಂದು ಗೊಂಚಲನ್ನು ಮಾತ್ರ ಕಿತ್ತು ಹಣ್ಣನ್ನು ಪಡೆಯಲು ತೊಡಗಿದ್ದಾನೆ; ಅವನ ಬಣ್ಣ ಪೀತ. ಐದನೆಯವನು ಗೊಂಚಲಿನಲ್ಲಿರುವ ತನಗೆ ಬೇಕಾದ ಹಣ್ಣೊಂದನ್ನು ಮಾತ್ರ ಕೀಳುತ್ತಿದ್ದಾನೆ. ಅವನ ಬಣ್ಣ ಪದ್ಮ. ಆರನೆಯವನು ಕೆಳಗೆ ಬಿದ್ದಿರುವ ಹಣ್ಣನ್ನು ಆಯ್ದುಕೊಳ್ಳಲು ಹೊರಟಿದ್ದಾನೆ; ಅವನ ಬಣ್ಣ ಶುಕ್ಲ ಅಂದರೆ ಬಿಳಿ.

ಲೇಶ್ಯಾತತ್ತ್ವ ಅನೇಕ ತಾತ್ತ್ವಿಕಾಂಶಗಳನ್ನು ಸೂಚಿಸುತ್ತದೆ. ಕ್ರಿಯೆಯ ಅನುಸಾರ ಪರಿಣಾಮ ಉತ್ತರೋತ್ತರವಾಗಿ ಉತ್ತಮಗೊಳ್ಳುತ್ತಾ ಹೋದಂತೆ ವ್ಯಕ್ತಿಯ ವ್ಯಕ್ತಿತ್ವ ಬೆಳೆಯುತ್ತಾ



ಹೋಗುತ್ತದೆ. ಕರ್ಮವನ್ನು ಗೆದ್ದ ವೀತರಾಗಿಯಾದ ಭಗವಂತನಿಗೆ ಯಾವ ಲೇಶ್ಯೆಯೂ ಇರುವುದಿಲ್ಲವೆಂದು ಹೇಳಲಾಗಿದೆ; ಏಕೆಂದರೆ ಭಗವಂತ ಶುದ್ಧಾತ್ಮ. ಹೀಗೆ ಲೇಶ್ಯಾ ಪರಿಭಾಷೆಯ ಮೂಲಕ ಜೈನಶಾಸ್ತ್ರವು ಮನಸ್ಸಿನ ವಿವಿಧ ನೆಲೆಗಳನ್ನು ವರ್ಣಿಸಿದೆ.

ಮನುಷ್ಯನ ವಿವಿಧ ಮನಃಸ್ಥಿತಿಗಳನ್ನು ಸಾರುವ ಮೇಲಿನ ಉದಾಹರಣೆಯು ಇಂದು ಮತ್ತೊಂದು ಅರ್ಥದಲ್ಲಿ ಧ್ವನಿಪೂರ್ಣವಾಗುತ್ತದೆ. ಮನುಷ್ಯ ಇಂದು ಸಸ್ಯಜಗತ್ತಿನೊಂದಿಗೆ ನಡೆಸುತ್ತಿರುವ ವ್ಯವಹಾರ ಹೆಚ್ಚಾಗಿ ಕೃಷ್ಣಲೇಶ್ಯಾ ಪ್ರವೃತ್ತಿಯದು. ಅಂತಹ ಕರಾಳಭಾವದಿಂದ ಇಂದು ಪರಿಸರ ನಾಶವಾಗುತ್ತಿದೆ. ಪದ್ಮ, ಶುಕ್ಲ ಲೇಶ್ಯೆಯವರು ಈ ಹಿನ್ನೆಲೆಯಲ್ಲಿ ಅತಿ ವಿರಳ. ನಮ್ಮ ಪರಿಸರ ಉಳಿಯಬೇಕಾದರೆ ಸಾತ್ವಿಕ ಮನೋಧರ್ಮ ಬೇಕಾಗುತ್ತದೆ.

ಪದಾರ್ಥಸಾರದಲ್ಲಿ ಇದನ್ನು ಕುರಿತು ವರ್ಣಚಿತ್ರವೊಂದು ಲಭಿಸುತ್ತದೆ. ಆದರೆ ಆ ಚಿತ್ರಕಾರರ ಬಗೆಗೆ ಯಾವೊಂದು ಮಾಹಿತಿಯೂ ಇಲ್ಲ. ಶ್ರವಣಬೆಳಗೊಳದ ಜೈನ ಮಠ ಹಾಗೂ ಇನ್ನಿತರ ಕೆಲವು ಜೈನ ದೇವಾಲಯಗಳಲ್ಲಿ ಈ ವರ್ಣಚಿತ್ರ ವಿಶೇಷವಾಗಿ ಕಂಡುಬರುತ್ತದೆ. ಅಂದರೆ, ಜೈನರಲ್ಲಿ ಇಂದಿಗೂ ಈ ಪ್ರತಿಮೆ ಸಾಕಷ್ಟು ಪ್ರಸಿದ್ಧಿಯನ್ನೂ, ಪ್ರಚಾರವನ್ನೂ ಪಡೆದುಕೊಂಡಿದೆ ಎಂಬುದು ಸ್ಪಷ್ಟ. ಶ್ರವಣಬೆಳಗೊಳದಲ್ಲಿ ಮೂಡಿಬಂದಿರುವ ಚಿತ್ರ ಕ್ರಿ.ಶ. ೧೯ನೇ ಶತಮಾನಕ್ಕೆ ಸೇರಿದ್ದೆಂದು ತಿಳಿದುಬರುತ್ತದೆ. ಪದಾರ್ಥಸಾರದಲ್ಲಿ ಕಂಡು ಬರುವ ಚಿತ್ರವನ್ನು ಇಲ್ಲಿ ಕೊಡಲಾಗಿದೆ.

**ಪರಿಸರಪ್ರಜ್ಞೆ ಮೂಡಿಸುವ ವೃಕ್ಷಪ್ರತಿಮೆ :**

ಶ್ರೀರಾಮಕೃಷ್ಣ ಪರಮಹಂಸರು ನಿರೂಪಿಸಿರುವ ಕಥೆಯೊಂದರಲ್ಲಿ ಮನಸ್ಸಿನ ವಿವಿಧ ಪ್ರಕ್ರಿಯೆಗಳು ಹೀಗೆ ಮೂಡಿಬಂದಿವೆ: ಒಮ್ಮೆ ಕಾಡಿನ ಮೂಲಕ ವ್ಯಕ್ತಿಯೊಬ್ಬ ನಡೆದುಕೊಂಡು ಹೋಗುತ್ತಿದ್ದ. ಆಗ ಮೂರು ಜನ ದರೋಡೆಕೋರರು ಅವನ ಮೇಲೆ ಬಿದ್ದು ಅವನಲ್ಲಿದ್ದುದನ್ನೆಲ್ಲ ಕಸಿದುಕೊಂಡರು. ಅವರಲ್ಲಿ ಮೊದಲನೆಯ ಕಳ್ಳ, "ಇವನನ್ನು ಉಳಿಸಿ ಏನು ಪ್ರಯೋಜನ?" ಎಂದು ಭಾವಿಸಿ ಅವನನ್ನು ಕೊಲ್ಲಲು ಅಣಿಯಾದ. ಆಗ ಎರಡನೆಯ ದರೋಡೆಕೋರ, "ಅವನನ್ನು ಕೊಂದು ಏನು ಪ್ರಯೋಜನ? ಅವನ ಕೈಕಾಲುಗಳನ್ನು ಕಟ್ಟಿ ಇಲ್ಲೆ ಬಿಡೋಣ" ಎಂದ. ದರೋಡೆಕೋರರು ಅವನ ಕೈಕಾಲುಗಳನ್ನು ಕಟ್ಟಿ ಅವನನ್ನು ಅಲ್ಲೇ ಬಿಟ್ಟು ಮುನ್ನಡೆದರು. ಸ್ವಲ್ಪ ಸಮಯದ ನಂತರ ಮೂರನೆಯ ದರೋಡೆಕೋರ ಹಿಂತಿರುಗಿ ಬಂದು "ಅಯ್ಯೋ, ನನಗೆ ದುಃಖವಾಗುತ್ತಿದೆ. ನಿನಗೆ ತುಂಬಾ ನೋವಾಗಿದೆಯೇ? ನಾನು ನಿನ್ನನ್ನು ಬಂಧನದಿಂದ ಬಿಡಿಸುತ್ತೇನೆ" ಎಂದು ಅವನನ್ನು ಬಿಡಿಸಿದ. ನಂತರ ದರೋಡೆಕೋರ ಆ ಪ್ರಯಾಣಿಕನನ್ನು ಕುರಿತು 'ನನ್ನ ಜೊತೆಯಲ್ಲಿ ಬಾ. ನಾನು ನಿನ್ನನ್ನು ರಾಜಮಾರ್ಗಕ್ಕೆ ಕರೆದುಕೊಂಡು ಹೋಗಿ ಬಿಡುತ್ತೇನೆ" ಎಂದ. ಸ್ವಲ್ಪ ಕಾಲ ನಡೆದ ಮೇಲೆ ರಾಜಮಾರ್ಗ ದೊರೆಯಿತು. ಆಗ ಪ್ರಯಾಣಿಕನು—'ನೀನು ನನಗೆ ಬಹಳ ಉಪಕಾರ ಮಾಡಿರುವೆ" ಎಂದು ಕೃತಜ್ಞತೆಯನ್ನು ಸೂಚಿಸಿ ಮುನ್ನಡೆದ.

ಈ ಸನ್ನಿವೇಶದ ತಾತ್ತ್ವಿಕ ಹಿನ್ನೆಲೆ ಹೀಗಿದೆ: ಈ ಪ್ರಪಂಚವೇ ಒಂದು ಕಾಡು. ಇಲ್ಲಿ ಕಾಡುತ್ತಿರುವ ಮೂರು ಜನ ದರೋಡೆಕೋರರೇ ಸತ್ವ, ರಜಸ್ಸು, ತಮಸ್ಸು ಎಂಬುವ ಗುಣಗಳು. ತಮಸ್ಸು ಪ್ರಯಾಣಿಕನನ್ನು ಕೊಲ್ಲಲು ಪ್ರಯತ್ನಿಸುವುದು; ಅದು ಅತ್ಯಂತ ಕ್ರೂರ ಭಾವವನ್ನು ಹೊಂದಿರುವುದು. ಅವನನ್ನು ಕಟ್ಟಿಹಾಕುವ ರಜಸ್ಸು ತಮೋಗುಣಕ್ಕಿಂತ ಪರಿಷ್ಕಾರಗೊಂಡ ಭಾವವುಳ್ಳದ್ದು. ಸತ್ವ ಅವನನ್ನು ತಮಸ್ಸು ಮತ್ತು ರಜೋಗುಣಗಳ



ಕೈಯಿಂದ ಪಾರುಮಾಡುವುದು. ಆದರೆ ಸತ್ವವೂ ಕೂಡ ಮನುಷ್ಯನಿಗೆ ಮುಕ್ತಿಯನ್ನು ಕೊಡಲಾರದು. ಅದು ಏನಿದ್ದರೂ 'ನೋಡು, ಇಲ್ಲಿದೆ ನಿನ್ನ ಮನೆ''ಎಂದು ಮಾರ್ಗದರ್ಶಿ ಆಗಬಲ್ಲುದು (ಆಧಾರ: ಕಥೆಗಾರ ಶ್ರೀರಾಮಕೃಷ್ಣ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೧೯೮೭).

**ಮೃತ್ಯುಭೀಕರತೆ ಹಾಗೂ ಸಂಸಾರದ ಅಸಾರತೆಯನ್ನು ಸಾರುವ ಕಥೆಗಳು:**

ಜೈನಶಾಸ್ತ್ರ ಸಾಹಿತ್ಯದಲ್ಲಿ ಕಂಡುಬರುವ "ಮಧು ಬಿಂದು ದೃಷ್ಟಾಂತ" ಎಂಬ ಕಥೆಯು ಮಾನವನು ಮೃತ್ಯುವೆಂಬ ಕಠೋರಸತ್ಯದ ಮಡಿಲಿನಲ್ಲಿದ್ದರೂ ಅದನ್ನು ಲೆಕ್ಕಿಸದೆ ಭೋಗಕ್ಕೆ ಒಲಿಯುವ ಪ್ರತಿಮೆಯನ್ನು ನೀಡುತ್ತದೆ.

ಓರ್ವ ಪ್ರಯಾಣಿಕ ದಾರಿತಪ್ಪಿ ಒಂದು ಕಾಡನ್ನು ಪ್ರವೇಶಿಸಿದ. ಒಂದು ಆನೆ ಅವನನ್ನು ಅಟ್ಟಿಸಿಕೊಂಡು ಬಂದಿತು. ಓಡಿ ತಪ್ಪಿಸಿಕೊಳ್ಳುವಾಗ ಅವನು ಒಂದು ಬಾವಿಯ ಬಳಿ ಬೆಳೆದು ನಿಂತಿದ್ದ ದೊಡ್ಡ ಆಲದ ಮರದ ಬಳಿಗೆ ಬಂದ. ಭಯಗೊಂಡ ಆ ಮನುಷ್ಯನು ನೇತಾಡುತ್ತಿದ್ದ ಒಂದು ಬಳ್ಳಿಯನ್ನು ಹಿಡಿದು, ಬಾವಿಯೊಳಗೆ ಜೋತುಬಿದ್ದನು. ಆದರೆ ಆ ಬಾವಿಯೊಳಗೆ ಬಾಯಿ ತೆರೆದುಕೊಂಡು ಕಬಳಿಸಲು ಸಿದ್ಧವಾಗಿರುವ ಒಂದು ಹೆಬ್ಬಾವು ಇತ್ತು. ಬಾವಿಯ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಸರ್ಪಗಳು ಇವನನ್ನು ಕಚ್ಚಲು ಪ್ರಯತ್ನಿಸುತ್ತಿದ್ದವು. ಇವನು ಜೋತುಬಿದ್ದಿದ್ದ ಆ ಬಳ್ಳಿಯನ್ನು ಕಪ್ಪು ಮತ್ತು ಬಿಳಿ ಇಲಿಗಳೆರಡು ಕಡಿಯುತ್ತಿದ್ದವು. ಮದವೇರಿದ ಆನೆಯು ಬಾವಿಯ ಬಳಿ ನಿಂತು, ತನ್ನ ಸೊಂಡಲಿನಿಂದ ಅವನನ್ನು ಹಿಡಿಯಲು ಪ್ರಯತ್ನಿಸುತ್ತಿತ್ತು. ಆ ಮರದಲ್ಲಿ ದೊಡ್ಡ ಜೇನು ಹುಟ್ಟೊಂದು ಜೇನುಹುಳುಗಳಿಂದ ತುಂಬಿ ಹೋಗಿತ್ತು. ಹುಚ್ಚೆದ್ದ ಆನೆಯು ಮರವನ್ನು ಒಮ್ಮೆ ಅಲುಗಾಡಿಸಿತು. ಅಲುಗಾಟಕ್ಕೆ ಜೇನಿನ ಹುಟ್ಟಿನಿಂದ ಜಾರಿಬಿದ್ದ ಜೇನ ಹನಿಗಳು ಆ ಮನುಷ್ಯನ ತುಟಿಯ ಮೇಲೆ ಬಿದ್ದವು. ಅವುಗಳ ರುಚಿಯನ್ನು ಅವನು ಆಸ್ವಾದಿಸಿದ. ಅಷ್ಟರಲ್ಲಿ ಜೇನು ಹುಳುಗಳು ಅವನನ್ನು ಮುತ್ತಲು ತೊಡಗಿದ್ದವು. ಮೇಲೆ ದೇವತೆಗಳು ವಿಮಾನದಲ್ಲಿದ್ದು ಅವನನ್ನು ಪಾರುಮಾಡಲು ಕರೆಯುತ್ತಿದ್ದರು. ಆದರೆ ಅವನಿಗೆ ಆ ಕಡೆ ಗಮನವಿಲ್ಲ. (ವಸುದೇವಹಿಂಡಿ—ಪ್ರಾಕೃತ). [ಈ ಕತೆ ಮಹಾಭಾರತದ ವಿದುರ ನೀತಿಯಲ್ಲೂ ಬರುತ್ತದೆ.]

ಇಲ್ಲಿ ಲೌಕಿಕ ಮನುಷ್ಯನ ಚಿತ್ರಣವಿದೆ. ಹುಟ್ಟು ಸಾವು ಜರಾಮರಣಗಳಿಂದ ಕೂಡಿರುವ ಪ್ರಪಂಚವೇ ಕಾಡು; ಬಾವಿ ಎನ್ನುವುದು ಮಾನವನ ಜೀವನ; ಹೆಬ್ಬಾವು ಎನ್ನುವುದು ನರಕ; ನಾಲ್ಕು ಸರ್ಪಗಳು ನಮ್ಮಲ್ಲಿರುವ ಕ್ರೋಧ, ಮಾನ, ಮಾಯೆ, ಲೋಭಗಳು; ಬಿಳಿ ಮತ್ತು ಕಪ್ಪು ಇಲಿಗಳು ಕಾಲವನ್ನು ಸೂಚಿಸುವ ಕೃಷ್ಣಪಕ್ಷ, ಶುಕ್ಲಪಕ್ಷಗಳು—ಆಯುಷ್ಯ ವ್ಯಯವಾಗುತ್ತಿರುವ ಸಂಕೇತಗಳು; ಜೇನು ಇಂದ್ರಿಯ ಸುಖ; ಮರ ಅಜ್ಞಾನ; ದೇವತೆಗಳನ್ನು ಕಡೆಗಣಿಸುವಿಕೆ, ಪಾರಾಗುವ ಮಾರ್ಗ ಎದುರಿಗೇ ಇದ್ದರೂ ಅದರ ಕಡೆಗೆ ಗಮನವೀಯದೆ ಆ ಅಪಾಯದಲ್ಲಿಯೇ ತೊಳಲುವ ಮನುಷ್ಯನ ದಡ್ಡತನ ಎಂಬಿವೇ ಅಂತರಾರ್ಥಗಳನ್ನು ಈ ಪ್ರತಿಮೆ ಒಳಗೊಂಡಿದೆ. ಅಲ್ಪಸುಖಕ್ಕಾಗಿ ಮನುಷ್ಯ ಈ ಭೀಕರವಾದ ಸಂಸಾರಕ್ಕೆ ಒಲಿಯುತ್ತಾನೆ ಎಂಬುದನ್ನು ಈ ಕಥೆ ಸೂಚಿಸುತ್ತದೆ.

ಈ ಮೇಲಿನ ಪ್ರತಿಮೆಯನ್ನೂ ಕೂಡ ಚಿತ್ರಕಾರರು ವರ್ಣಚಿತ್ರ ವಿನ್ಯಾಸದಲ್ಲಿ ಬಿಡಿಸಿದ್ದಾರೆ. ಜಿನಾಲಯಗಳಲ್ಲಿ ಈ ಚಿತ್ರ ಸಾಮಾನ್ಯವಾಗಿ ದೊರೆಯುತ್ತದೆ.

ಶ್ರೀರಾಮಕೃಷ್ಣ ಪರಮಹಂಸರ 'ಸಂಸಾರದ ಆನಂದ' ಎಂಬ ಶೀರ್ಷಿಕೆಯ ಕತೆಯೂ ಮೇಲಿನ ಭಾವನೆಯನ್ನೇ ಎತ್ತಿ ಹಿಡಿದಿದೆ:

ಒಬ್ಬ ಪ್ರಯಾಣಿಕ ನಡೆಯುತ್ತಾ ಒಂದು ಕಾಡಿಗೆ ಬಂದ. ಅವನಿಗೆ ತುಂಬಾ ದಣಿವಾಗಿತ್ತು. ಮೈಯೆಲ್ಲಾ ಬೆವರುತ್ತಿತ್ತು. ಒಂದು ಮರದ ಕೆಳಗೆ ವಿಶ್ರಮಿಸಲು ಕುಳಿತುಕೊಂಡ. 'ನನಗೆ ಮಲಗಿಕೊಳ್ಳಲು ಒಂದು ಮೆತ್ತನೆಯ ಹಾಸಿಗೆಯಿದ್ದರೆ ಎಷ್ಟು ಚೆನ್ನ" ಎಂದು ಆಲೋಚಿಸಿದ. ತತ್‌ಕ್ಷಣ ಅದು ಬಂತು. ತಾನೊಂದು ಕಲ್ಪವೃಕ್ಷದ ಕೆಳಗೆ ಮಲಗಿರುವೆನೆಂದು ಅವನಿಗೆ ಗೊತ್ತಾಗಲಿಲ್ಲ. ಅವನಿಗೆ ತುಂಬಾ ಆಶ್ಚರ್ಯವಾಗಿ ಅದರ ಕೆಳಗೆ ವಿಶ್ರಮಿಸಿಕೊಂಡ. ಅನಂತರ ಅವನ ಮನಸ್ಸಿನಲ್ಲಿ ಮತ್ತೊಂದು ಆಸೆ ತಲೆದೋರಿತು. "ಒಬ್ಬ ತರುಣಿ ಬಂದು ತನ್ನ ಕಾಲುಗಳನ್ನು ಒತ್ತಿದರೆ ಎಷ್ಟು ಚೆನ್ನ" ಎಂದುಕೊಳ್ಳುತ್ತಿದ್ದಂತೆ ಒಬ್ಬ ಸುಂದರ ತರುಣಿ ಬಂದು ಅವನ ಕಾಲುಗಳನ್ನು ಒತ್ತುತ್ತಿದ್ದಳು. ಅವನಿಗೆ ಹೊಟ್ಟೆ ಹಸಿವಾಯಿತು. 'ನನಗೆ ಊಟಕ್ಕೆ ಏನಾದರೂ ಸಿಕ್ಕೀತೆ?" ಎಂದು ಯೋಚಿಸಿದ. ತತ್‌ಕ್ಷಣವೇ ರುಚಿರುಚಿಯಾದ ತಿಂಡಿತೀರ್ಥಗಳು ಅವನ ಮುಂದೆ ಬಂದವು. ಅವನು ತೃಪ್ತಿಯಾಗುವಷ್ಟು ತಿಂದು ಮಲಗಿದ. ಇದ್ದಕ್ಕಿದ್ದಂತೆ ಅವನ ಮನಸ್ಸಿನಲ್ಲಿ 'ಹುಲಿ ಏನಾದರೂ ಬಂದು ನನ್ನ ಮೇಲೆ ಎಗರಿದರೆ ಏನು ಗತಿ?" ಎಂಬ ಆಲೋಚನೆ ಮೂಡಿಬಂತು. ಕೂಡಲೇ ದೊಡ್ಡ ಹುಲಿಯೊಂದು ಅವನ ಮೇಲೆ ಬಿದ್ದು ಅವನ ರಕ್ತವನ್ನು ಹೀರಿತು. (ಆಧಾರ: ಕಥೆಗಾರ ಶ್ರೀರಾಮಕೃಷ್ಣ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೧೯೮೭)

ಪ್ರಾಪಂಚಿಕ ಆಸೆಗಳಿಗೆ ಮನಸೋತರೆ ಮನುಷ್ಯನಿಗೆ ಅವುಗಳೇನೋ ದೊರೆಯಬಹುದು. ಆದರೆ ಅದರ ಹಿಂದೆ ಭೀಕರವಾದ ಸಾವು ನೋವುಗಳೂ ಹುದುಗಿವೆ. ಅವು ಹುಲಿಗಿಂತಲೂ ಭಯಂಕರ ಎಂಬುದನ್ನು ತಿಳಿಸಲು ಮೇಲಿನ ಕಥೆಯನ್ನು ನಿರೂಪಿಸಲಾಗಿದೆ.

ಎಲ್ಲ ಮತಧರ್ಮಗಳಲ್ಲಿಯೂ ಇಂತಹ ತತ್ತ್ವವಿಚಾರಗಳನ್ನು ಸ್ಫುರಿಸುವ ಅನೇಕ ಕಥೆಗಳು ದೊರೆಯುತ್ತವೆ. ಅವುಗಳನ್ನು ಸಂಗ್ರಹಿಸಿ, ವರ್ಗೀಕರಿಸಿ ಅಧ್ಯಯನ ನಡೆಸಲು ಅವಕಾಶವಿದೆ. ಇಲ್ಲಿ ಅಂತಹ ಒಂದು ಸಣ್ಣ ಪ್ರಯತ್ನವನ್ನು ಮಾಡಲಾಗಿದೆ. ✪

## ಆತ್ಮಾನುಭವವನ್ನೊದಗಿಸಿದ ಪರ್ಯಟನ

ಗಂಗಾಧರನು (ಮುಂದೆ ಸ್ವಾಮಿ ಅಖಂಡಾನಂದರು) ಶ್ರೀರಾಮಕೃಷ್ಣರ ನಿರ್ಯಾಣಾನಂತರ ಅವರು ಕೊಟ್ಟಿದ್ದ ಕಾವಿ ವಸ್ತ್ರವನ್ನು ತೆಗೆದುಕೊಂಡು ಯಾರಿಗೂ ಹೇಳದೆ ಪರ್ಯಟನಕ್ಕಾಗಿ ಹೊರಟ. ಒಮ್ಮೆ ವಾರಾಣಸಿಯಲ್ಲಿರುವಾಗ ಸಂಸ್ಕೃತ ಘನವಿದ್ವಾಂಸರಾದ ಭಾಸ್ಕರಾನಂದರು ತಾವು ಗಂಗಾಧರನಿಗೆ ವೇದಗಳನ್ನು ಹೇಳಿಕೊಡಲು ಇಚ್ಛಿಸುವುದಾಗಿ ಹೇಳಲು ಗಂಗಾಧರನು "ಪುಸ್ತಕಗಳನ್ನೋದಿ ಜ್ಞಾನ ಸಂಪಾದನೆ ಮಾಡಲು ಬಳಕೆಯಾಗುವ ದೃಕ್‌ಶಕ್ತಿಯನ್ನು ದಯವಿಟ್ಟು ಅಂತರಂಗದ ಕಡೆ ತಿರುಗಿಸಿ ನನಗೆ ಆತ್ಮಾನುಭವವಾಗುವಂತೆ ಮಾಡಿ" ಎಂದು ಕೇಳಿಕೊಂಡನು. ಭಾಸ್ಕರಾನಂದರು ಆಶ್ಚರ್ಯಪಟ್ಟು "ನೀನೊಬ್ಬ ಯೋಗಿ ಎಂಬುದು ನನಗೆ ಅರಿವಾಯಿತು" ಎಂದರು.



ಸ್ವಾಮಿ ಅಖಂಡಾನಂದ

ಕೋಟಿಗಟ್ಟಲೆ ಪುಸ್ತಕಗಳಿಂದ ಕಲಿಯುವುದಕ್ಕಿಂತಲೂ ಒಬ್ಬ ಸಂತನಿಂದ ಕಲಿಯಬಹುದಾದದ್ದು ಹೆಚ್ಚು. ಗಂಗಾಧರನು ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನು ಸಂತರಿಂದ ಹಾಗೂ ಪವಿತ್ರಕ್ಷೇತ್ರಗಳಿಂದ ಗಳಿಸಿಕೊಂಡನು. ಹರಿದ್ವಾರದಲ್ಲಿರುವಾಗ ಒಂದು ದಿನ ಬೆಳಗ್ಗೆ ಮುಂಚೆ ಗಂಗಾಧರನು ಚಂಡೀ ಬೆಟ್ಟವನ್ನು ಹತ್ತಿ ಅಲ್ಲಿದ್ದ ಕಾಮರಾಜ್ ಎಂಬ ತಾಂತ್ರಿಕ ಸಂತನನ್ನು ಭೇಟಿಮಾಡಿದನು. ಗಂಗಾಧರನಿಂದ ಪ್ರಭಾವಿತನಾದ ಕಾಮರಾಜನು "ನಿನಗೇನು ಬೇಕು?" ಎಂದು ಕೇಳಲು, ಗಂಗಾಧರನು "ಗೀತೆಯಲ್ಲಿ ಹೇಳಿರುವ ಯಾವುದನ್ನು ಪಡೆದರೆ ದುಃಖವಿರುವುದಿಲ್ಲವೋ, ಆಸೆಯಿರುವುದಿಲ್ಲವೋ (೧೨.೧೭) ಅದು ನನಗೆ ಬೇಕು" ಎಂದನು. ಸಂತನು "ಆಹಾ, ನಿನಗೆ ಆತ್ಮಜ್ಞಾನ ಬೇಕಲ್ಲವೆ! ನನ್ನ ಜಗನ್ಮಾತೆ ನಿನಗೆ ಬೇಡ" ಎಂದು ಉದ್ಗರಿಸಿದನು. ಜಗನ್ಮಾತೆಯ ಮೇಲಣ ಸಂತನ ಪ್ರೀತಿ ಗಂಗಾಧರನ ಮನ ಕಲಕಿತು. ✪